# ಗದ್ದಲದ ನಡುವೆ ಮದುವೆ ಆಗುತ್ತದೆ



**ತ್ರಿವಿಕ್ರಮ್**
**ಕಲರ್ಸ್ ಕನ್ನಡದ 'ಮುದ್ದುಸೊಸೆ'ಯ ಭದ್ರ**

◆ **'ಬಿಗ್ ಬಾಸ್' ಸಂಚಿಕೆಯನ್ನು ನೀವು ವೀಕ್ಷಿಸಿದಾಗ ಹೇಗೆನಿಸಿತು?**

'ಬಿಗ್ ಬಾಸ್' ಮನೆ ಕೂಡ ನಮ್ಮ ಮನೆಯಂತೆ ಇತ್ತು. ಹಾಗೆಯೇ ಅಲ್ಲಿ ನಾನಿದ್ದೆ. ಆದರೆ ಆಗ ಅಲ್ಲಿನ ಕೆಲಸ ಟಾಸ್ಕ್‌ಗಳ ಬಗ್ಗೆ ಮಾತ್ರ ಗಮನಕೊಟ್ಟಿದ್ದೆ. ಹೊರಬಂದು ನಾನು ನೋಡಿದ ನಂತರ ಜನ ಹೇಗೆ ನನ್ನನ್ನು ನೋಡಿದ್ದಾರೆ ಎನ್ನುವುದು ಗೊತ್ತಾಯಿತು. ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಪಡೆದೆ. ಜನ ಪ್ರೀತಿಯಿಂದ ನನ್ನನ್ನು ಸ್ವೀಕರಿಸಿದ್ದಾರೆ ಎನ್ನುವುದು ಗೊತ್ತಾಯಿತು. ಅವರ ಪ್ರೋತ್ಸಾಹ ನನ್ನಲ್ಲಿ ಹುಮ್ಮಸ್ಸನ್ನು ತುಂಬಿದೆ.

ಸಿನಿಮಾ, ಸೀರಿಯಲ್ ಮಾಡಿದ್ದೇನೆ. ಅಂತೆಯೇ 'ಬಿಗ್ ಬಾಸ್'. ಜನ ನೋಡಿದ್ದಾರೆ, ಬೆಂಬಲಿಸಿದ್ದಾರೆ. ನನ್ನ ಎಲ್ಲ ಕೆಲಸಗಳ ಬಗ್ಗೆ ಕೂಡ ಹೇಳುತ್ತಾರೆ. 'ಬಿಗ್ ಬಾಸ್' ವೇದಿಕೆ ಮೂಲಕ ಅವರೆಗೆ ತಲುಪದೇ ಇದ್ದ ಜನರನ್ನೂ ತಲುಪಿದ್ದೇನೆ ಎನ್ನುವುದು ಗೊತ್ತಾಯಿತು.

◆ **ಮದುವೆ ಎಲ್ಲಿಗೆ ಬಂತು? ಅಪ್ರಾಪ್ತಳನ್ನು ಮದುವೆ ಆಗುತ್ತಿರುವ ಪ್ರಶ್ನೆ ಎದುರಾಗಿತ್ತೇ?**

ಕಂಟೆಂಟ್ ಚೆನ್ನಾಗಿದೆ ಎನ್ನುವ ಭಾವನೆಯಲ್ಲಿ ಈ ಪಾತ್ರವನ್ನು ಒಪ್ಪಿಕೊಂಡಿದ್ದೇನೆ. ಮುಗ್ಧ ಹುಡುಗ ಭದ್ರನ ಪಾತ್ರವನ್ನು ನಿರ್ವಹಿಸುತ್ತಿರುವುದು ಕೂಡ ಇಷ್ಟವಾಗಿದೆ. ಮದುವೆ ಗದ್ದಲಗಳ ಮಧ್ಯದಲ್ಲಿ ನಡೆಯುತ್ತಿದೆ. ವೀಕ್ಷಕರ ಪ್ರತಿಕ್ರಿಯೆ ಕೂಡ ಚೆನ್ನಾಗಿದೆ. ನಮ್ಮ 'ಬಿಗ್ ಬಾಸ್' ವೀಕ್ಷಕರೂ ಇಲ್ಲಿ ಇದ್ದಾರೆ.

ಅಪ್ರಾಪ್ತ ಬಾಲಕಿಯ ಮದುವೆಗೆ ಸಂಬಂಧಿಸಿದಂತೆ ಕೆಲವರು ಪ್ರಶ್ನೆ ಕೇಳಿದ್ದೂ ಇದೆ. ಇದು ಹಳ್ಳಿಯ ಬದುಕಿನ ಚಿತ್ರಣ. ಭದ್ರನಿಗೆ ಮದುವೆಯ ಒತ್ತಡ ಇರುತ್ತದೆ. ಅಪ್ಪ ಮದುವೆ ಆಗಬೇಕು ಎಂದು ಆದೇಶಿಸಿದ್ದಾರೆ. ಅದಕ್ಕೆ ಭದ್ರ ತಾನು ಇಷ್ಟಪಟ್ಟ ಹುಡುಗಿಯನ್ನು ಮದುವೆಯಾಗಲು ಸಜ್ಜಾಗುತ್ತಾನೆ. ಆದರೆ ಅವನಿಗೆ ಅಪ್ರಾಪ್ತಳು ಎನ್ನುವ ಬಗ್ಗೆ ತಿಳಿವಳಿಕೆ ಇಲ್ಲ. ಶಾಲೆಯ ಸಮವಸ್ತ್ರದಲ್ಲಿಯೇ ಅವಳನ್ನು ನೋಡಿದರೂ ಅದು ಯಾವುದೂ ಅವನಿಗೆ ಗೊತ್ತಿಲ್ಲ. ಹಳ್ಳಿಯ ವಾತಾವರಣ, ಅನಕ್ಷರತೆಯ ಮುಗ್ಧತೆಯೇ ಹಾಗೆ. ಅವಳ ಒಳ್ಳೆಯತನವನ್ನು ಕಂಡು ಅವನು ಆಕರ್ಷಿತನಾಗುತ್ತಾನೆ. ಹಾಗಾಗಿ ಮದುವೆಯ ಪ್ರಶ್ನೆ ಬಂದಾಗ ಅವಳನ್ನು ತೋರಿಸುತ್ತಾನೆ. ಇಲ್ಲಿ ಶಿಕ್ಷಣ ಇಲ್ಲ ಎನ್ನುವುದು ಮುಖ್ಯ ಆಗುತ್ತದೆ.

◆ **ಒಂದು ಕಡೆ ಕ್ರಿಕೆಟ್ ಮತ್ತೊಂದು ಕಡೆ ನಟನೆ ಇವೆರಡರ ಸವಾಲು ಮತ್ತು ಒಲವಿನ ಬಗ್ಗೆ ಹೇಳಿ?**

ಏನೇ ಇದ್ದರೂ ನಾನು ಚಂದನವನಕ್ಕೆ ಸೇರುವ ವ್ಯಕ್ತಿ. ಸಿನಿಮಾವನ್ನೇ ಮಾಡಬೇಕು. ಒಳ್ಳೆಯ ಸಿನಿಮಾ ನೀಡಬೇಕು ಎನ್ನುವುದು ನನ್ನ ಆಸೆ. ನಾನು ಕ್ರಿಕೆಟರ್ ಆಗಬೇಕು ಎಂದುಕೊಂಡವನು, ಅದಾಗಲಿಲ್ಲ. ಈಗ ಸಿನಿಮಾರಂಗದಲ್ಲಿ ಇದ್ದೇನೆ. ನನ್ನ ಒಲವು ಮತ್ತು ಗಮನ ಸಂಪೂರ್ಣ ಇಲ್ಲೇ ಇದೆ. ಚಿತ್ರರಂಗಕ್ಕೆ ಬಂದ ಮೇಲೆ ಮತ್ತೆ ಆಟ ಆಡುವ ಅವಕಾಶವೂ ಸಿಕ್ಕಿದೆ. ಇದರಿಂದ ಅನುಕೂಲತೆಗಳು ಹೆಚ್ಚೇ ಸಿಕ್ಕಿವೆ. ಇದರಿಂದಲೇ ಹೆಸರಾಂತ ಹಿರಿಯ ನಟರನ್ನು ಹತ್ತಿರದಿಂದ ಮಾತನಾಡಿಸಲು ಸಾಧ್ಯ ಆಗಿದೆ. ಶಿವಣ್ಣ, ಗಣೇಶ್, ಸುದೀಪ್ ಅವರೆಲ್ಲ ಭೇಟಿಯಾಗಿದ್ದು ಕ್ರೀಡಾಂಗಣದಲ್ಲಿಯೇ. ಇಲ್ಲದಿದ್ದರೆ ಅವರ ಭೇಟಿಗೆ ವಿಶೇಷ ಸಂದರ್ಭವೇ ಎದುರಾಗಬೇಕಾಗುತ್ತದೆ. ಖಾಸಗಿಯಾಗಿ ಭೇಟಿ ಆಗಲು ಸಾಧ್ಯವೂ ಇಲ್ಲ. ಕ್ರಿಕೆಟ್ ನನ್ನ ಆಟ ಪ್ಯಾಶನ್ ಉಳಿಸಿಕೊಳ್ಳಲು ಫಿಟ್‌ನೆಸ್ ಕಾಪಾಡಲು ಸಹಾಯವಾಗುತ್ತದೆ ಎನ್ನುವುದು ಕೂಡ ಕಾರಣ. ಒಬ್ಬ ನಟನಾಗಿ ಫಿಟ್ ಆಗಿ ಇರಬೇಕು. ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ಆಟವಾಡುವುದು ಅನುಕೂಲ ಆಗುತ್ತದೆ. ಆ ಮಿತಿಯಲ್ಲೇ ಕ್ರಿಕೆಟ್ ಪ್ರೀತಿ ಉಳಿದುಕೊಂಡಿದೆ.

◆ **ನಟನೆಗೆ ಮನಸ್ಸು ಮಾಡಿದ್ದು ಹೇಗೆ?**

ಆಗಷ್ಟೇ ಎಂಬಿಎ ಮುಗಿಸಿ ಜಿಮ್ ತರಬೇತುದಾರನಾಗಿ ಕೆಲಸವನ್ನು ಆರಂಭಿಸಿದ್ದೆ. ನನ್ನ ಜಿಮ್‌ಗೆ ಒಬ್ಬ ನಿರ್ದೇಶಕ ಮತ್ತು ಒಬ್ಬ ನಿರ್ಮಾಪಕ ಬರುತ್ತಿದ್ದರು. ಅವರು ಅಭಿನಯಿಸಲು ಪ್ರಯತ್ನಿಸು ಎಂಬ ಸಲಹೆಯನ್ನು ನೀಡಿದರು. ಅವರ ಪ್ರೋತ್ಸಾಹದ ಮಾತು ನನಗೂ ಪ್ರೇರಣೆಯನ್ನು ನೀಡಿತು. ಅದರಿಂದಾಗಿ ರಂಗಭೂಮಿಯತ್ತ ಮುಖ ಮಾಡಿದೆ. ನಟನೆಯನ್ನು ಕಲಿಯುವ ಪ್ರಯತ್ನ ಒಂದಿಷ್ಟು ಯಶಸ್ಸು ಕೊಟ್ಟಿತು. ಕೆಲ ನಾಟಕಗಳಲ್ಲಿ ಆಡಿದೆ. ನಂತರ ಸಿನಿಮಾ, 'ಪದ್ಮಾವತಿ' ಧಾರಾವಾಹಿ ಮೂಲಕ ಪೂರ್ಣಾವಧಿ ನಟನೆಯನ್ನ ಅಪ್ಪಿಕೊಂಡಿದ್ದೇನೆ.

◆ **ನಿಮ್ಮ ಯೋಜನೆ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ...**

ನಿರ್ದೇಶಕ ಸೂರಿ ಅವರ ಜೊತೆ ಹಿಂದೆ ಕೆಲಸ ಮಾಡಿದ್ದೇನೆ. ಅಂತಹ ನಿರ್ದೇಶಕರ ಜೊತೆ ಇನ್ನೂ ಕೆಲಸ ಮಾಡಬೇಕು. ಸಿನಿಮಾವನ್ನೇ ಮಾಡಬೇಕು ಎನ್ನುವ ಉತ್ಕಟ ಬಯಕೆ ಇದೆ. ಚಂದನವನದ ಪರಿಸ್ಥಿತಿ ಸದ್ಯ ತುಂಬ ಕಠಿಣವಾಗಿದೆ. ಜನರ ನಡುವೆ ಇರಲೇಬೇಕು. ಆ ನಿಲುವನ್ನು ಕಾಪಾಡಿಕೊಂಡು ಹೋಗುವ ನಿಟ್ಟಿನಲ್ಲಿ ಧಾರಾವಾಹಿಗಳ ಕೆಲಸ ಇರುತ್ತದೆ. ತೆಲುಗಿನಲ್ಲಿಯೂ ಕೆಲಸ ಮಾಡಿದ ಅನುಭವ ಇದೆ. ಈ ಮೂಲಕ ಸಿನಿಮಾಕ್ಕೆ ಏನು ಕೊಡಲು ಸಾಧ್ಯ ಎನ್ನುವ ಯೋಚನೆ ಕೂಡ ಇದೆ.

■ **ರಾಘವೇಂದ್ರ ಕೆ.**